# ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ

## ಸಿ.ಸಿ. ನಂ : 1043/2020

ಸಾಕ್ಷಿದಾರರ ಹೆಸರು : ತಿಪ್ಪೇಶಿ.ಎಸ್.ಇ ಪಿಡಬ್ಲ್ಯು:04

ತಂದೆ / ಗಂಡನ ಹೆಸರು : ಈಶ್ವರಪ್ಪ.ಎಮ್. ಸಿಡಬ್ಲ್ಯು:06

ವಯಸ್ಸು : 46 ವರ್ಷ

ಉದ್ಯೋಗ :ಪೋಲೀಸ್ ಮುಖ್ಯಪೇದೆ

ವಾಸಸ್ಥಳ : ಚಿಕ್ಕಜಾಜೂರು ಪ್ರ.ವ.ಬೋ ದಿ. :28.05.2024

## ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ.ಯವರಿಂದ

ನಾನು 2011 ರಿಂದ 2016ರವರಗೆ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ:08.11.2012 ರಂದು ಸಂಜೆ 04:45 ಗಂಟೆಗೆ ನಾನು ಮತ್ತು ಚಾ.ಸಾ: 7 ರವರು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರು ನಮ್ಮನ್ನು ಕರೆದು ಬಾತ್ಮಿದಾರರಿಂದ ಬಂದ ಕರೆಯ ಮೇರೆಗೆ ಹೊಳಲ್ಕೆರೆ ತಾಲ್ಲೂಕು, ಎನ್.ಜಿ.ಹಳ್ಳಿ ಗೇಟ್‌ನ ಬಳಿ ಯಾರೋ ಇಬ್ಬರೂ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ತಿಳಿಸಿ ಅವರ ಮೇಲೆ ದಾಳಿ ಮಾಡಬೇಕೆಂದು ತಿಳಿಸಿದ್ದು, ಸಂಜೆ 4:50 ಗಂಟೆಗೆ ಪಂಚರನ್ನು ಠಾಣೆಗೆ ಬರಮಾಡಿಕೊಂಡು ಚಾಸಾ.1 ರವರು ಅವರಿಗೆ ಸದರಿ ವಿಚಾರವನ್ನು ತಿಳಿಸಿದ್ದು ನಂತರ ನಾವುಗಳೆಲ್ಲರೂ ದಾಳಿ ಮಾಡಲು ಕೆಎ.16 ಜಿ.232 ರ ಠಾಣಾ ಜಿಪಿನಲ್ಲಿ ಸಂಜೆ 05 ಗಂಟೆಗೆ ಪೊಲೀಸ್ ಠಾಣೆಯನ್ನು ಎನ್.ಜಿ.ಹಳ್ಳಿ ಗೇಟ್ ಬಳಿ ಜೀಪನ್ನು ನಿಲ್ಲಿಸಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಸ್ಥಳದ ಹತ್ತಿರ ಕಾಲ ನಡಿಗೆಯಲ್ಲಿ ನಡೆದುಕೊಂಡು 05:30 ಗಂಟೆಗೆ ಹೋಗಿ ಮರೆ ಮಾಚಿ ನಿಂತು ನೋಡಲಾಗಿ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ರಟ್ಟಿನ ಬಾಕ್ಸಿನಲ್ಲಿ ಮಧ್ಯವನ್ನು ಇಟ್ಟುಕೊಂಡು ಅಕ್ರಮವಾಗಿ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ನಾವುಗಳು ಅವರನ್ನು ಹಿಡಿಯಲು ಮುಂದಾದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ರಟ್ಟಿನ ಬಾಕ್ಸ್‌ಳನ್ನು ಅಲ್ಲಿಯೇ ಬಿಟ್ಟು ಸಮೀಪದಲ್ಲಿದ್ದ ಜೋಳದ ಹೊಲಕ್ಕೆ ಓಡಿಹೋಗಿ ತಪ್ಪಿಸಿಕೊಂಡಿರುತ್ತಾರೆ. ನಂತರ ನಾವುಗಳು ಅವರು ಮಧ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಸ್ಥಳಕ್ಕೆ ಹಿಂದಿರುಗಿ ಬಂದು ಅಲ್ಲಿಯೇ ನಿಂತಿದ್ದ ಚಾಸಾ.4 ಮತ್ತು 5 ರವರನ್ನು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದವರ ಹೆಸರು ವಿಳಾಸವನ್ನು ಕೇಳಲಾಗಿ, ರಾಮಾಂಜನೇಯ ತಂದೆ ಕೃಷ್ಣಪ್ಪ, ಹೊಳಲ್ಕೆರೆ ಟೌನ್ ಮತ್ತು ಸಾಕಮ್ಮ ಗಂಡ

ಚಂದ್ರಪ್ಪ, ಗಂಗಸಮುದ್ರ ಗ್ರಾಮ ಎಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿದ್ದ ರಟ್ಟಿನ ಬಾಕ್ಸಗಳನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ರಟ್ಟಿನ ಬಾಕ್ಸನಲ್ಲಿ 180 ಎಂ.ಎಲ್ ನ ಒಟ್ಟು 39 ಓಲ್ಡ ಟಾವರ್ನ್ ವಿಸ್ಕಿಯ ಪೌಚಗಳಿದ್ದು, ನಂತರ ಅವುಗಳಲ್ಲಿ ಒಂದನ್ನು ಎಫ್.ಎಸ್.ಎಲ್. ಗೆ ಕಳುಹಿಸುವ ಸಲುವಾಗಿ ಬಿಳಿ ಬಟ್ಟೆಯಲ್ಲಿ ಹಾಕಿಕೊಂಡು ಅದರ ಬಾಯನ್ನು ದಾರದಿಂದ ಕಟ್ಟಿ ಪಿ.ಆರ್.ಓ. ಎಂಬ ಇಂಗ್ಲೀಷ್ ಅಕ್ಷರಗಳಿಂದ ಸೀಲ್ ಮಾಡಿ ಪಂಚನಾಮೆಯನ್ನು ಸಂಜೆ 06 ರಿಂದ 07 ಗಂಟೆಯವರೆಗೆ ಪಂಚರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಮಧ್ಯದ ಪೌಚುಗಳ ಅಂದಾಜು ಬೆಲೆ 1,950 ರೂಗಳಾಗಿದ್ದು, ಸದರಿ ಪಂಚನಾಮೆಗೆ ನನ್ನ ಸಹಿಯನ್ನು ಮಾಡಿರುತ್ತೇನೆ. ನಂತರ ಪಂಚಾನಾಮೆ ಮತ್ತು ಮಾಲನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತೇನೆ. ಮಾಲು ಮತ್ತು ಆರೋಪಿತರನ್ನು ಪುನಃ ನೋಡಿದರೆ ಗುರುತಿಸುತ್ತೇನೆಂದು ದಿಃ 09.11.2012 ರಂದು ಚಾ.ಸಾಃ 1 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು : 1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1 (ಡಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆಂದು ತಿಳಿಸಿದ್ದು, ಈ ದಿನ ಆರೋಪಿತರು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೋಪಿತರ ವಕೀಲರು ಗೈರು ಹಾಜರಾತಿಯ ವಿನಾಯತಿಯ ಅರ್ಜಿಯನ್ನು ಸಲ್ಲಿಸಿದ್ದು, ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿದ್ದರಿಂದ ಆರೋಪಿತರನ್ನು ಗುರುತಿಸಲಾಯಿತು ಎಂದು ತೆಗೆದುಕೊಳ್ಳಲಾಗಿರುತ್ತದೆ.

**ಪಾಟೀಸವಾಲು : ಆರೋಪಿತರ ಪರ ಶ್ರೀ ಬಿ.ಎನ್.ಪಿ. ವಕೀಲರಿಂದ**

ದಾಳಿ ಮಾಡಲು ಪಂಚರನ್ನು ಯಾರು, ಎಲ್ಲಿಂದ ಕರೆದುಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎನ್.ಜಿ.ಹಳ್ಳಿ ಗೇಟ್ ಬಳಿ 4 ದಿಕ್ಕಿನಲ್ಲಿ ರಸ್ತೆಗಳಿರುವ ವೃತ್ತ ಇದೆ ಎಂದರೆ ಸರಿ. ಎನ್.ಜಿ.ಹಳ್ಳಿ ಗೇಟ್ ಬಳಿ ಯಾವ ಸ್ಥಳದಲ್ಲಿ ನಾವು ನಿಖರವಾಗಿ ಬೇಟಿ ನೀಡಿರುತ್ತೇವೆ ಎಂದು ಹೇಳಲು ಆಗುವುದಿಲ್ಲ. ನಾವು ಮರೆಮಾಚಿ ನಿಂತು ನೋಡಿದ ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ. 1 ಮತ್ತು 2 ನೇ ಆರೋಪಿತರಿಗೆ ಏನು ಸಂಬಂಧ ಎಂಬ ಬಗ್ಗೆ ನಾವು ವಿಚಾರಿಸಿರುವುದಿಲ್ಲ. ಚಾಸಾ.4 ಮತ್ತು 5 ರವರು ಯಾವ ಕಾರಣಕ್ಕಾಗಿ ಘಟನಾ ಸ್ಥಳದಲ್ಲಿದ್ದರು ಎಂಬ ಬಗ್ಗೆ ನಾವು ವಿಚಾರಿಸಿರುವುದಿಲ್ಲ. ನಾವು ಅಮಾನತ್ತು ಪಡಿಸಿಕೊಂಡ ಮಧ್ಯದ ಪೌಚುಗಳ ಮೇಲೆ ತಯಾರಿಕಾ ದಿನಾಂಕ, ಬ್ಯಾಚ್ ನಂಬರಗಳನ್ನು ನಾವು ನಮೂದಿಸಿಕೊಂಡಿರುವುದಿಲ್ಲ. ನಿಪಿ.1 ನ್ನು ಯಾರು

ಬರೆದಿರುತ್ತಾರೆಂದು ಹೇಳಲು ಆಗುವುದಿಲ್ಲ. ನಾವು ದಿನಾಂಕ 08.11.2012 ರಂದು ಯಾವುದೇ ಸ್ಥಳಕ್ಕೆ ಬೇಟಿ ನೀಡದೇ ಇದ್ದರೂ ಸಹ ಚಾಸಾ.1 ರವರು ನಮ್ಮ ಮೇಲಾಧಿಕಾರಿಯಾಗಿದ್ದರಿಂದ ಅವರ ಮಾತು ಕೇಳಿ ನಿಪಿ.1 ನ್ನು ಠಾಣೆಯಲ್ಲಿಯೇ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಗಳಿಗೋಸ್ಕರ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಕ್ಕೆ ಮತ್ತು ಆರೋಪಿತರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಸಂಗತಿಗಳೆಲ್ಲ ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ :

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ